ಲೋಕಾಯುಕ್ತ ದಾಖಲಿಸಿದ ಪ್ರಕರಣಗಳು

62 (593) ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ (ಶಿವಮೊಗ್ಗ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕಾಯುಕ್ತದಲ್ಲಿ ಇಲ್ಲಿಯವರೆಗೆ ಎಷ್ಟು ಜನ ಸರ್ಕಾರಿ ಅಧಿಕಾರಿಗಳ ಪ್ರಕರಣಗಳು ದಾಖಲಾಗಿವೆ; (ವಿವರ ನೀಡುವುದು)

ಆ) ಸಿವಿಲ್ ಕೋರ್ಟ್‌ಗಳಲ್ಲಿ ಪ್ರಕರಣ ಮುಗಿಸಲು ಇಂತಿಷ್ಟೆ ಕಾಲಾವಧಿ ಒಳಗೆ ಮುಗಿಸಲು ಕ್ರಮ ಕೈಗೊಳ್ಳಲಾಗಿದೆಯೇ? (ವಿವರ ನೀಡುವುದು)

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು)

ಅ) ಕರ್ನಾಟಕ ಲೋಕಾಯುಕ್ತ ಪ್ರಾರಂಭವಾದ 1986ನೇ ವರ್ಷದಿಂದ 31-01-2001ರವರೆಗೆ ಒಟ್ಟು 3003 ಪ್ರಕರಣಗಳನ್ನು ಭ್ರಷ್ಟಾಚಾರ ನಿರ್ಮೂಲನಾ ಕಾಯಿದೆ, 1988ರ ಪ್ರಕಾರ ವಿವಿಧ ಅಧಿಕಾರಿಗಳ ಮೇಲೆ ದಾಖಲು ಮಾಡಿಕೊಳ್ಳಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಭ್ರಷ್ಟಾಚಾರ ನಿರ್ಮೂಲನಾ ಅಧಿನಿಯಮ, 1988ರ ಪ್ರಕಾರ ಸದರಿ ಅಪರಾಧಗಳು ಕ್ರಿಮಿನಲ್ ಪ್ರಕರಣಗಳಾಗಿದ್ದು, ಇವುಗಳನ್ನು ವಿಶೇಷ ಮತ್ತು ಜಿಲ್ಲಾ ಸತ್ರ ನ್ಯಾಯಾಲಯಗಳಲ್ಲಿ ಮಾತ್ರ ವಿಚಾರಣೆಗೆ ಒಳಪಡಿಸಲಾಗುತ್ತದೆ. ಆದುದರಿಂದ ಸಿವಿಲ್ ಕೋರ್ಟ್‌ಗಳಿಗೂ ಈ ಪ್ರಕರಣಗಳಿಗೂ ಯಾವುದೇ ಸಂಬಂಧವಿರುವುದಿಲ್ಲ.

ಸಾಂದರ್ಭಿಕವಾಗಿ ಹೇಳುವುದಾದರೆ, ನ್ಯಾಯಾಂಗ ನಡವಳಿಗಳನ್ನು ಪೂರ್ಣಗೊಳಿಸಲು ಕಟ್ಟುನಿಟ್ಟಾದ ಕಾಲಮಿತಿಯನ್ನು ನಿಗದಿಪಡಿಸಿ, ಅದನ್ನು ಪಾಲಿಸದೆ ಇದ್ದಲ್ಲಿ, ಆ ನಡವಳಿಗಳು ದೋಷಿತಗೊಳಿಸುತ್ತವೆ. ಆದುದರಿಂದ ಅಂತಹ ಕಟ್ಟುನಿಟ್ಟಾದ ಕಾಲಮಿತಿಯನ್ನು ನಿಗದಿಪಡಿಸುವುದು ಅಪೇಕ್ಷಣೀಯವಲ್ಲ.

ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ, ವಿಧಾನಸಭಾ ಸದಸ್ಯರು, ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 593ರ ಐಟಂ (ಅ)ಗೆ ಅನುಬಂಧ

DIVN.	NATURE OF CASES				I.O.'s DISPOSAL				COURT DISPOSAL							Groupwise AGO's			
	Trap	Raid	Oths.	Total	CHARGESHEETED	B/C REPT	ORDER FOR D.E.	TRANSFER	U/I	CONVICTED	ACQTD.	DISCHARGE	ABATED/ CLOSED	P.T	TOTAL	A	B	C	D
1	2	3	4	5	6	7	8	9	10	11	12	13	14	15	16	17	18	19	20
CITY	389	72	35	496	261	116	34	5	80	33	136	23	6	63	261	157	96	329	34
BANGALORE	376	21	4	401	214	116	19	-	52	6	56	7	8	137	214	112	10	307	3
CHITRADURGA	327	26	2	355	210	87	20	11	27	4	57	-	4	145	210	44	57	271	9
MYSORE	510	48	4	562	339	109	31	10	73	35	55	13	14	222	339	56	134	430	8
MANGALORE	291	16	9	316	171	77	10	11	47	18	45	-	2	106	171	29	80	232	9
GULBARGA	283	20	10	313	175	83	34	-	21	9	63	3	4	96	175	24	80	217	-
BELGAUM	509	46	5	560	426	42	10	29	53	12	64	6	6	338	426	65	132	372	22
TOTAL	2685	249	69	3003	1796	630	158	66	353	117	476	52	44	1107	1796	487	589	2158	85

ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ: ಅಧ್ಯಕ್ಷರೇ, ಇಲ್ಲಿ ಕೇವಲ 6 ಜಿಲ್ಲೆಗಳ ವಿವರ ಮಾತ್ರ ಕೊಟ್ಟಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಲೋಕಾಯುಕ್ತ ಇದೆಯೋ ಇಲ್ಲವೋ ಗೊತ್ತಿಲ್ಲ. ಈಗ ಏನಾಗಿದೆ ಅಂದರೆ ಲೋಕಾಯುಕ್ತದ ಅಧಿಕಾರಿಗಳು ಇದರಲ್ಲಿ ಶಾಮೀಲಾಗುತ್ತಿದ್ದಾರೆ. ಅವರನ್ನು ಹೊಂದಿಕೊಂಡು ಕೆಲಸ ಮಾಡುವ ಸ್ಥಿತಿ ಬಂದಿದೆ. ಲಂಚ ಹೊಡೆದು ಅವರ ಜೊತೆ ಕೆಲಸ ಮಾಡಿ ಡಿಸ್ಮಿಸ್ಸಾಗಿ ಪುನಃ ಕೆಲಸಕ್ಕೆ ಬರುತ್ತಿದ್ದಾರೆ.

ಡಾ: ಜಿ. ಪರಮೇಶ್ವರ್: ಅಧ್ಯಕ್ಷರೇ, ಎಲ್ಲ ಜಿಲ್ಲೆಗಳಲ್ಲೂ ಲೋಕಾಯುಕ್ತ ವಿಭಾಗ ಮಾಡಿಲ್ಲ, ಹಾಲಿ ಲೋಕಾಯುಕ್ತ ವಿಭಾಗಗಳು 7 ಇವೆ: (1) ಬೆಂಗಳೂರು ಸಿಟಿ (2) ಬೆಂಗಳೂರು ಗ್ರಾಮಾಂತರ (3) ಚಿತ್ರದುರ್ಗ (4) ಮಂಗಳೂರು (5) ಮೈಸೂರು (6) ಗುಲ್ಬರ್ಗ ಮತ್ತು (7) ಬೆಳಗಾಂ - ಉಳಿದ ಜಿಲ್ಲೆಗಳನ್ನು ಇವುಗಳಲ್ಲಿ ಸೇರಿಸಲಾಗಿದೆ. ಆದ್ದರಿಂದ ಪ್ರತಿ ಜಿಲ್ಲೆಯಲ್ಲೂ ಲೋಕಾಯುಕ್ತ ಎಸ್ಪಿ ಇರುವುದಿಲ್ಲ. ಎರಡನೆಯದು, ಅಧಿಕಾರಿಗಳನ್ನು ಸಸ್ಪೆಂಡ್ ಮಾಡುವುದು. ಅವರ ವಿರುದ್ಧ ಹೊರಿಸಿರುವ ಆರೋಪಣೆಗಳನ್ನು ಪ್ರೂವ್ ಮಾಡಲಾಗದಿದ್ದರೆ ತಕ್ಷಣ ಸಸ್ಪೆನ್ಶನ್ ರಿವೋಕ್ ಮಾಡಲಾಗುವುದು. ಆದ್ದರಿಂದ, ಏನು ಕ್ರಮವನ್ನೂ ಜರುಗಿಸಿಲ್ಲ ಎಂದು ಹೇಳಲು ಬರುವುದಿಲ್ಲ.

ಶ್ರೀ ಎಸ್. ಯೋಗೀಶ್ ಭಟ್: ಅಧ್ಯಕ್ಷರೇ, ನನ್ನಲ್ಲಿ ಒಂದು ಮಾಹಿತಿ ಇದೆ. ಆಶ್ರಯ ಯೋಜನೆಯಡಿ ಅವ್ಯವಹಾರವಾಗಿ 10 ಕೋಟಿ ರೂಪಾಯಿಗಳು ದುರುಪಯೋಗವಾಗಿದೆಯೆಂದು ಸಿಐಡಿ ವರದಿ ಬಂದು 6 ತಿಂಗಳಾದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಏನು ಕ್ರಮ ತಾವು ಜರುಗಿಸುವಿರಿ? ಗೃಹಮಂಡಲಿಗೆ ಸಂಬಂಧಿಸಿದಂತೆ ನಿಶ್ಚಿತವಾದ ಹಗರಣಗಳನ್ನು ಬಜೆಟ್ ಭಾಷಣದ ಸಂದರ್ಭದಲ್ಲಿ ಉಲ್ಲೇಖಿಸಿದ್ದೆ. ಆದರಲ್ಲೂ ಕೂಡ ಯಾವುದೇ ಕ್ರಮ ಜರುಗಿಸಿಲ್ಲ.

ಡಾ: ಜಿ. ಪರಮೇಶ್ವರ್: 1986ರಲ್ಲಿ ಲೋಕಾಯುಕ್ತ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ 3,003 ಕೇಸುಗಳನ್ನು ಅವರು ಬುಕ್ ಮಾಡಿದ್ದಾರೆ. ಅದರಲ್ಲಿ ಬಹಳ ಕೇಸ್‌ಗಳಲ್ಲಿ ಕನ್ವಿಕ್ಷನ್ನೂ ಆಗಿದೆ. ಉಳಿದ ಕೇಸುಗಳು ಬೇರೆಬೇರೆ ಹಂತಗಳಲ್ಲಿ ಪೆಂಡಿಂಗಿವೆ. ಒಬ್ಬ ಅಧಿಕಾರಿ ವಿರುದ್ಧ ಅವ್ಯವಹಾರದ ಕೇಸ್ ಬುಕ್ ಮಾಡಿದಾಗ ಅದನ್ನು ಸಾಬೀತುಪಡಿಸಲು ಸಮಯ ಹಿಡಿಯುತ್ತದೆ. 353 ಕೇಸುಗಳು ವಿವಿಧ ಹಂತಗಳಲ್ಲಿವೆ. ತಾವು ಹೇಳಿದ್ದೂ ಅದರಲ್ಲಿ ಸೇರಿರಬಹುದು.

ಶ್ರೀ ಸಿ. ಗುರುಸ್ವಾಮಿ: ಲಂಚ ತೆಗೆದುಕೊಳ್ಳುವ ಸಂದರ್ಭದಲ್ಲಿ ಲೋಕಾಯುಕ್ತದವರು ಹಿಡಿದಾಗ ಹಿಡಿದಿರುವವರನ್ನು ಹಿಡಿದವರೇ ಬೇಲ್ ಮೇಲೆ ಬಿಟ್ಟು ಕಳಿಸಿ ಬಿಡುತ್ತಾರೆ ಮತ್ತೆ ಏನೂ ಆಗುವುದಿಲ್ಲ, ಅದನ್ನೇ ಹೋಗಿ ಸರಿಮಾಡಿಕೊಂಡು ಬಂದು ಬಿಡುತ್ತಾರೆ. ಆದ್ದರಿಂದ ನನ್ನ ಸಲಹೆ ಏಂದರೆ, ಲೋಕಾಯುಕ್ತದವರು ಹಿಡಿದಾಗ ಅದನ್ನು ನಾನ್‌ಬೇಲಬಲ್ ಅಫೆನ್ಸ್ ಎಂದು ಮಾಡಬೇಕು. ಇಲ್ಲದಿದ್ದರೆ ಭ್ರಷ್ಟಾಚಾರ ಕಡಿಮೆ ಮಾಡಲು ಕಷ್ಟವಾಗುತ್ತದೆ. ಇದನ್ನು ಸೀರಿಯಸ್ಸಾಗಿ ತೆಗೆದುಕೊಳ್ಳಬೇಕು.

ಡಾ: ಜಿ. ಪರಮೇಶ್ವರ್: ಸದಸ್ಯರ ಸಲಹೆ ಬಹಳ ಸೂಕ್ತವಾಗಿದೆ. ಇದೇ ಸಭೆಯಲ್ಲಿ ಹಿಂದೆ ಮುಖ್ಯಮಂತ್ರಿಗಳು ಇದರ ಬಗ್ಗೆ ಪ್ರಸ್ತಾಪ ಮಾಡಿದಾಗ ಇದಕ್ಕೆ ಅಡಚಣೆ ಮತ್ತು ವಿರೋಧ

ಪಕ್ಷದ ಸದಸ್ಯರು ಸೂಕ್ತ ಸಲಹೆ ಕೊಡಬೇಕು, ಅದರ ಬಗ್ಗೆ ಬಹಳ ಚರ್ಚೆಯೂ ಆಗಬೇಕು ಎಂದು ಹೇಳಿದ್ದರು. ಒಬ್ಬ ಅಧಿಕಾರಿಯನ್ನು ರೈಡ್ ಮಾಡಿ ಹಿಡಿದು ಸಸ್ಪೆಂಡ್ ಮಾಡಿದರೆ ಅವರು ಕೆಲಸಕ್ಕೆ ಸೇರಿದಾಗಿನಿಂದ ಇಲ್ಲಿಯವರೆಗೆ ಎಷ್ಟು ಆಸ್ತಿ ಸಂಪಾದಿಸಿದರು ಅದನ್ನು ಪ್ರೂವ್ ಮಾಡಬೇಕಾಗುತ್ತದೆ. ಅಲ್ಲಿಯವರೆಗೆ ಅವರನ್ನು ಸಸ್ಪೆನ್‌ಶನ್‌ನಲ್ಲೇ ಉಳಿಸಿದರೆ ಐದು ವರ್ಷಗಳಾದರೂ ಅವರಿಗೆ ಶೇಕಡ 75ರಷ್ಟು ಸಂಬಳ ಕೊಡಬೇಕಾಗುತ್ತದೆ. ಆ ಕಾರಣಕ್ಕೇ ತಕ್ಷಣ ಸಸ್ಪೆಂಡ್ ಮಾಡುವುದಿಲ್ಲ. ಹೌದು ಇವರು ಅವ್ಯವಹಾರ ಮಾಡಿದ್ದಾರೆ ಎಂಬ ಮಾಹಿತಿ ಸಿಕ್ಕಿದ ಮೇಲೇ ಸಸ್ಪೆಂಡ್ ಮಾಡುವುದು. ಬೇಗಬೇಗ ಈ ಕೇಸ್‌ಗಳು ಇತ್ಯರ್ಥವಾಗಬೇಕೆಂದು ಒಂದು ಸ್ಪೆಶಲ್ ಕೋರ್ಟ್ ರಚಿಸಬೇಕೆಂದು ಹೈಕೋರ್ಟ್‌ಗೆ ಒಂದು ಮನವಿ ಕೂಡ ಸಲ್ಲಿಸಿದ್ದೇವೆ. ಅದಾದಮೇಲೆ ಬೇಗಬೇಗ ಕೇಸ್‌ಗಳು ಇತ್ಯರ್ಥವಾಗುತ್ತದೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ಲೋಕಾಯುಕ್ತದಲ್ಲಿರುವವರಿಗೆ ಎಲ್ಲ ಗೊತ್ತಿದೆ: ಯಾವ ಇಲಾಖೆಯಲ್ಲಿ ಭ್ರಷ್ಟಾಚಾರ ಜಾಸ್ತಿ ಇದೆ ಎಂದು. ಪೊಲೀಸ್ ಇಲಾಖೆಯಲ್ಲಿ, ಸಬ್ ರಿಜಿಸ್ಟ್ರಾರ್ ಕಚೇರಿಗಳಲ್ಲಿ ಕಂದಾಯ ಆಫೀಸ್‌ಗಳಲ್ಲಿ. ಅವರೂ ಲೋಕಾಯುಕ್ತದವರ ಜೊತೆ ಸೇರಿಕೊಂಡು ಅವರ ಕೆಲಸ ಮುಂದುವರೆಸಿದ್ದಾರೆ, ಭ್ರಷ್ಟಾಚಾರ ಜಾಸ್ತಿ ಆಗುತ್ತಿದೆ. ಈಗ ಲೋಕಾಯುಕ್ತ ಎಂದರೆ ಯಾವ ಹೆದರಿಕೆಯೂ ಇಲ್ಲ, ಮೊದಲು ಭಯ ಇತ್ತು, ಲೋಕಾಯುಕ್ತದವರು ಬರುತ್ತಾರೆ ಎಂದು. ಇವರು ಎಷ್ಟು ಅಧಿಕಾರಿಗಳನ್ನು ಹಿಡಿದಿದ್ದಾರೆ? ಎಷ್ಟು ಜನರು ಸಸ್ಪೆಂಡ್ ಆದರು? ಎಷ್ಟು ಜನರ ವಿರುದ್ಧ ಚಾರ್ಜ್‌ಶೀಟ್ ಹಾಕಿದಮೇಲೂ ಇನ್ನೂ ಡ್ಯೂಟಿಮೇಲೆ ಇದ್ದಾರೆ? ಹೀಗಾದರೆ ಇಂತಹ ಲೋಕಾಯುಕ್ತ ಇದ್ದೂ ಏನು ಪ್ರಯೋಜನ? ಲೋಕಾಯುಕ್ತ ಅಂದರೆ ಎಫ್‌ಕ್ಟೀವ್ ಆಗಿರಬೇಕು. ಅವರು ಬರುತ್ತಾರೆ, ಬರುತ್ತಾರೆ ಎಂಬ ಭಯ ಇರಬೇಕು.

ಅಧ್ಯಕ್ಷರು: ಅದಕ್ಕೆ ಏನು ಮಾಡಬೇಕು ಹೇಳಿ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ನಾನು ಹೇಳುವುದು ಭ್ರಷ್ಟಾಚಾರವೆಂಬುದು ಲೋಕಾಯುಕ್ತದಲ್ಲೂ ಇದೆಯಾ? ಅದನ್ನೇನಾದರೂ ತಾವು ಹಿಡಿದಿದ್ದೀರಾ? ಎಷ್ಟು ಜನ ಸಬ್‌ರಿಜಿಸ್ಟ್ರಾರ್‌ಗಳನ್ನು ಹಿಡಿದಿದ್ದೀರಿ? ಒಂದು ನಿಮಿಷದಲ್ಲಿ ಹಿಡಿದು ಹಾಕಬಹುದು. ಯಾರಿಗೂ ತಿಳಿಯದಂತೆ ಹೋಗಿ ಸಬ್‌ರಿಜಿಸ್ಟ್ರಾರ್‌ಗಳನ್ನು ಹಿಡಿದುಹಾಕೋಣ.

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಸುಬ್ಬಾರೆಡ್ಡಿಯವರು ಹಿರಿಯ ವಕೀಲರು. ಅವರೇ ಹೀಗೆ ಹೇಳಿದರೆ ಕಷ್ಟವಾಗುತ್ತದೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಚಂದ್ರೇಗೌಡರು ಕೂಡ ಈ ಬಗ್ಗೆ ಚೆನ್ನಾಗಿ ತಿಳಿದಿದ್ದಾರೆ. ಯಾವ ಯಾವ ಡಿಪಾರ್ಟ್‌ಮೆಂಟ್‌ನಲ್ಲಿ ಯಾವ ಯಾವ ಅಧಿಕಾರಿಗಳು ಏನೇನು ಮಾಡುತ್ತಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತು. ಭ್ರಷ್ಟಾಚಾರದ ಬಗ್ಗೆ ತಿಳಿದಿದ್ದರೂ ಕೂಡ ತಾವುಗಳು ಏನು ಮಾಡಿದ್ದೀರಿ? ಉದಾಹರಣೆಗೆ ಪೊಲ್ಯೂಶನ್ ಕಂಟ್ರೋಲ್‌ಬೋರ್ಡ್‌ನಲ್ಲಿ ಅನೇಕ ಪೆಲ್ಯೂಶನ್ ಇದ್ದರೂ ಕೂಡ ಅದನ್ನು ಸ್ವಚ್ಛಗೊಳಿಸಲು ನಿಮ್ಮಿಂದಾಗಲಿಲ್ಲ.

ಶ್ರೀ ಎನ್. ಯೋಗೀಶ್ ಭಟ್: ಮಾನ್ಯ ಅಧ್ಯಕ್ಷರೇ, ತಾವುಗಳು ಪನಿಶ್‌ಮೆಂಟ್ ಟ್ರಾನ್ಸ್‌ಫರ್ ಆದವರೆಲ್ಲರನ್ನು ಲೋಕಾಯುಕ್ತಕ್ಕೆ ಹಾಕಿದರೆ ಅಂಥವರು ಅಲ್ಲಿ ಏನು ಕೆಲಸ ಮಾಡಲು ಸಾಧ್ಯ? ಈ ಗೂಢಾಚಾರ ಇಲಾಖೆ ಅಥವಾ ಲೋಕಾಯುಕ್ತಕ್ಕೆ ಐಎಎಸ್, ಐಪಿಎಸ್-ರೀತಿಯಲ್ಲಿ ಪ್ರತ್ಯೇಕವಾದ ಒಂದು ಕೆಟಗರಿಯನ್ನು ಮಾಡಿ ಎಲ್ಲಾ ಇಲಾಖೆಗಳಲ್ಲಿಯೂ ಇವರಿಂದ ನಿಗಾ ಇರಿಸಿಕೊಳ್ಳುವ ಚಾಣಕ್ಯನೀತಿ ಏನಿದೆ. ಆ ಪ್ರಕಾರ ಕಾನೂನಿನ ಅನ್ವಯವೇ ವಾಚ್ ಮಾಡುವ ವ್ಯವಸ್ಥೆಯನ್ನು ಮಾಡಿದರೆ ಮಾತ್ರ ಇದು ಸ್ವಲ್ಪ ಹಿಡಿತಕ್ಕೆ ಬರಬಹುದು. ಇಲ್ಲವಾದಲ್ಲಿ ಇದರಿಂದ ಯಾವ ಪ್ರಯೋಜನವೂ ಸಿಗಲಾರದು.

ಡಾ: ಜಿ. ಪರಮೇಶ್ವರ್: ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ರೆಡ್ಡಿಯವರು ಕೇಳಿದ ಪ್ರಶ್ನೆಗೆ 3,003 ಕೇಸ್‌ಗಳಲ್ಲಿ 1796 ಕೇಸ್‌ಗಳಲ್ಲಿ ಚಾರ್ಜ್‌ಶೀಟ್ ಹಾಕಿದ್ದೇವೆ. 630 ಕೇಸ್‌ಗಳಲ್ಲಿ (ಬಿ) ರಿಪೋರ್ಟ್ ಆಗಿರುತ್ತದೆ. ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿಗೆ ಆರ್ಡರ್ ಮಾಡಿರುವುದು 158 ಕೇಸ್‌ಗಳಲ್ಲಿ. ಸಿಓಡಿ ಹಾಗೂ ಲೋಕಲ್ ಪೊಲೀಸ್ ಮುಂತಾಗಿ ಕೇಸ್‌ಗಳನ್ನು ಟ್ರಾನ್ಸ್‌ಫರ್ ಮಾಡಿರತಕ್ಕಂಥಾದ್ದು 66 ಪ್ರಕರಣಗಳು. ಇನ್ನೂ ವಿಚಾರಣ ಹಂತದಲ್ಲಿರುವುದು 353 ಪ್ರಕರಣಗಳು. 117 ಕೇಸ್‌ಗಳಲ್ಲಿ ಕನ್ವಿಕ್ಟ್ ಆಗಿರುತ್ತದೆ. 476 ಕೇಸ್‌ಗಳು ಕೋರ್ಟ್ ಡಿಸ್ಪೋಸಲ್‌ನಲ್ಲಿವೆ. ಹಾಗೂ 52 ಪ್ರಕರಣಗಳು ಡಿಸ್‌ಚಾರ್ಜ್ ಮಾಡತಕ್ಕಂಥಾದ್ದು ಇವೆ. ನಮ್ಮ ಸರಕಾರವು ಶ್ರೀಮಾನ್ ಹಾರ್ನಳ್ಳಿ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯ ಆಡಳಿತ ಸುಧಾರಣಾ ಆಯೋಗ ರಚನೆ ಮಾಡಿರುವುದನ್ನು ತಾವುಗಳೆಲ್ಲರೂ ತಿಳಿದಿದ್ದೀರಿ. ಅದರ ರೆಕಮಂಡೇಶನ್ಸ್‌ನಲ್ಲಿ ಈ ಭ್ರಷ್ಟಾಚಾರವನ್ನು ನಿಗ್ರಹ ಮಾಡುವಂಥ ಸಂಸ್ಥೆಗಳೇನಿವೆ ಅವುಗಳಿಗೆ ಕೆಲವು ರೆಕಮಂಡೇಶನ್ಸ್‌ನ್ನು ಮಾಡಿದ್ದಾರೆ. ಅದರಲ್ಲಿ ಕೆಲವನ್ನು ಸದನದ ಗಮನಕ್ಕೆ ತರಲಿಚ್ಛಿಸುತ್ತೇನೆ. ಲೋಕಾಯುಕ್ತರಿಗೆ ಮೊಕದ್ದಮೆ ಹೂಡುವುದು ಮುಂತಾದ ವಿಷಯಗಳಲ್ಲಿ ಸಿಬಿಐಗೆ ಸಮಾನವಾದ ಅಧಿಕಾರವನ್ನು ಕೊಡಬೇಕೆಂಬುದು ಒಂದು ಶಿಫಾರಸ್ಸಾಗಿದೆ. ಮೊಕದ್ದಮೆ ಹಿಂತೆಗೆದುಕೊಳ್ಳುವಿಕೆಯ ಪಿ.ಸಿ. ಕಾಯಿದೆ 1982 ರಿಂದ ವಿನಾಯಿತಿಯನ್ನು ಹೊಂದಿರಬೇಕು. ನಿಸ್ಸಂದೇಹವಾಗಿ ಪ್ರಾಮಾಣಿಕರು, ಅಧ್ಯಕ್ಷರು ಅದವರನ್ನು ಮಾತ್ರ ಲೋಕಾಯುಕ್ತದಲ್ಲಿ ನೇಮಿಸಬೇಕು. ತಾವುಗಳು ಲೋಕಾಯುಕ್ತದಲ್ಲಿಯೇ ಭ್ರಷ್ಟಾಚಾರವಿದೆ ಎಂದು ಕೂಡ ಹೇಳಿದ್ದೀರಿ. ಆ ಬಗ್ಗೆಯೂ ಆಯೋಗದವರು ತಮ್ಮ ಶಿಫಾರಸ್ಸುಗಳನ್ನು ಮಾಡಿದ್ದಾರೆ. ಜಾಲ ಬೀಸಿ ಅಥವಾ ದಾಳಿ ಮಾಡಿ ಹಿಡಿಯಲಾದ ಪ್ರಕರಣಗಳಲ್ಲಿ ಕೆಸಿಎಸ್ ಸಿಸಿ ಮತ್ತು ಎ ನಿಯಮಾವಳಿಯಲ್ಲಿನ 10-1ಕ್ಕೆ ತಿದ್ದುಪಡಿಯನ್ನು ತರಬೇಕು. ಲೋಕಾಯುಕ್ತರಿಗೆ ಸಾಕಷ್ಟು ಸಿಬ್ಬಂದಿ, ಅಧಿಕಾರ, ಸಂಪನ್ಮೂಲಗಳು ಮತ್ತು ಸ್ವತಂತ್ರದ ಜೊತೆಗೆ ಫಲಶ್ರುತಿಯ ಹೊಣೆಗಾರಿಕೆಯನ್ನು ವಹಿಸಬೇಕು. ಭ್ರಷ್ಟಾಚಾರ ವಿರೋಧ ಕಾರ್ಯವು ಸ್ವತಂತ್ರ ಸುವ್ಯವಸ್ಥಿತ ಜಾಗೃತ ದಳವನ್ನು ಅವಲಂಬಿಸಿರುತ್ತದೆ. ಸಾರ್ವಜನಿಕ ಸೇವೆಯಲ್ಲಿರುವವರು ತಮ್ಮ ಪ್ರಕಟಿತ ಆದಾಯಕ್ಕೆ ಹೊಂದದ ಗಳಿಸಿದ ಸ್ಥಿರ ಮತ್ತು ಚರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಪರಿಶೀಲಿಸಬೇಕು. ಅವರ ವಿರುದ್ಧ ಶಿಕ್ಷಾ ಕ್ರಮಗಳನ್ನು ಕೈಗೊಳ್ಳಬೇಕು ಲೋಕಾಯುಕ್ತರು ಆದಾಯ ತೆರಿಗೆ ಇಲಾಖೆಗೂ ಡಿಪಿಎಆರ್ ಇಲಾಖೆಗೂ ಸಂಬಂಧಪಟ್ಟಂತೆ ಮಾಹಿತಿ ವಿನಿಮಯ ಮತ್ತು ಸಂಯುಕ್ತ ಕಾರ್ಯಾಚರಣೆಯ ನಿಕಟಸಂಬಂಧವಿರಬೇಕು. ಅಂದರೆ ಸಿಸಿಎಆರ್‌ನಲ್ಲಿ ಅವರ ಎಲ್ಲಾ ವಿವರಗಳು ಇರಬೇಕೆನ್ನುವುದು ಬರುತ್ತದೆ. ಕೊನೆಯದಾಗಿ ಎಲ್ಲಾ ಮಾನ್ಯ ಶಾಸಕರುಗಳಿಗೆ ಸಂಬಂಧಪಟ್ಟ ವಿಚಾರವನ್ನು ಹೇಳಿದ್ದಾರೆ. ಎಲ್ಲಾ ಶಾಸಕರು ತಮ್ಮ ಅವಧಿಯಲ್ಲಿ ಒಮ್ಮೆ ತಮ್ಮ ಆಸ್ತಿವಿವರಗಳನ್ನು ಪ್ರಕಟಿಸಬೇಕು.

ಅಧ್ಯಕ್ಷರು: ಹಿಂದಿನ ವರ್ಷಗಳಲ್ಲಿ ಸುಮಾರು 76-86 ಜನ ಮಾನ್ಯ ಸದಸ್ಯರುಗಳು ತಮ್ಮ ಆಸ್ತಿ ವಿವರಗಳನ್ನು ಕೊಡಲಿಲ್ಲ. ಈ ವರ್ಷದಲ್ಲಿ ನಾನು ಮಾನ್ಯ ಶ್ರೀ ಚಂದ್ರೇಗೌಡರು, ಮಾನ್ಯ ಮುಖ್ಯಮಂತ್ರಿಯವರು ತೆಗೆದುಕೊಂಡಂಥ ಆಸಕ್ತಿಯಿಂದ ಕೇವಲ 6 ಜನ ಎಂಎಲ್ಎ ಗಳವರು ಹಾಗೂ 6 ಜನ ಎಂಎಲ್ಸಿಗಳವರು ಮಾತ್ರ ಕೊಟ್ಟಿಲ್ಲ. ಉಳಿದವರೆಲ್ಲರೂ ಕೊಟ್ಟಿದ್ದಾರೆ.

ಡಾ: ಜಿ. ಪರಮೇಶ್ವರ್: ಆಯೋಗದವರು ಶಾಸಕರುಗಳ ಬಗ್ಗೆ ಕೊಟ್ಟ ಪ್ರಾಮುಖ್ಯವಾದ ರೆಕಮೆಂಡೇಶನ್ ಇದಾಗಿದೆ. ಆಸ್ತಿವಿವರ ಮತ್ತಿತರ ವಿವರಗಳನ್ನು ಶಾಸಕರುಗಳು ಪ್ರಕಟಿಸದಿದ್ದಲ್ಲಿ ವೇತನ, ಮತ್ತಿತರ ಭತ್ಯೆಗಳನ್ನು ತಡೆಹಿಡಿಯತಕ್ಕದ್ದು ಮತ್ತು ಇದಕ್ಕೆ ಸೂಕ್ತವಾಗಿ ಲೋಕಾಯುಕ್ತ ಕಾಯಿದೆಯನ್ನು ತಿದ್ದುಪಡಿ ಮಾಡತಕ್ಕದ್ದು - ಎಂಬಿತ್ಯಾದಿ ಅನೇಕ ರೆಕಮೆಂಡೇಶನ್ಸ್ನ್ನು ಆಯೋಗದವರು ಕೊಟ್ಟಿದ್ದಾರೆ.

ಶ್ರೀ ಡಿ.ವಿ. ಸದಾನಂದಗೌಡ: ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಬಹಳ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಆದರೆ ನಾವುಗಳು ಲೋಕಾಯುಕ್ತಕ್ಕೆ ನಮ್ಮ ವಿವರಗಳನ್ನು ನಿಗದಿತ ಸಮಯದಲ್ಲಿ ಕೊಟ್ಟಿದ್ದರೂ ಕೂಡ ಪತ್ರಿಕೆಗಳಲ್ಲಿ ಕೊಟ್ಟವರ ಹೆಸರುಗಳೂ ಪ್ರಕಟವಾಗಿದೆ. ನಾವು ವಿವರಗಳನ್ನು ಸಲ್ಲಿಸಿರುವುದಕ್ಕೆ ದಾಖಲೆಗಳು ಕೂಡ ಇವೆ. ನನ್ನ ಹೆಸರೂ ಸೇರಿದಂತೆ ಹಲವಾರು ಶಾಸಕರುಗಳ ಹೆಸರನ್ನು ವಿವರ ಸಲ್ಲಿಸದೇ ಇದ್ದವರ ಪಟ್ಟಿಯಲ್ಲಿ ಪ್ರಕಟಿಸಿದ್ದಾರೆ. ಲೋಕಾಯುಕ್ತದವರಲ್ಲಿ ಪೂರ್ಣವಾದ ಮಾಹಿತಿಗಳು ಲಭ್ಯವಿದ್ದರೂ ಕೂಡ ತಪ್ಪು ಪ್ರಕಟಣೆಯನ್ನು ಪತ್ರಿಕೆಗಳಲ್ಲಿ ಏತಕ್ಕೆ ಕೊಡುತ್ತಿದ್ದಾರೆ ಎಂಬುದು ಅರ್ಥವಾಗುತ್ತಿಲ್ಲ. ಸರಕಾರದವರು ಈ ಬಗ್ಗೆ ಗಮನಹರಿಸುವ ಅವಶ್ಯಕತೆಯಿದೆ. ಮಾನ್ಯ ಅಧ್ಯಕ್ಷರು ಹೇಳಿದ ಹಾಗೆ 6 ಜನ ಎಂಎಲ್ಎ, 6 ಜನ ಎಂಎಲ್ಸಿ ಗಳವರು ಮಾತ್ರ ಆಸ್ತಿ ವಿವರಗಳನ್ನು ಸಲ್ಲಿಸಬೇಕಾಗಿದ್ದು ಉಳಿದವರೆಲ್ಲರೂ ಸಲ್ಲಿಸಿದ್ದಾರೆ. ಹಾಗಾದರೆ ಉಳಿದವರ ಹೆಸರುಗಳು ಪಟ್ಟಿಯಲ್ಲಿ ಹೇಗೆ ಸೇರುತ್ತವೆ? ನಾವು ಸಕಾಲದಲ್ಲಿ 3-4 ವರ್ಷಗಳಿಂದ ಕೊಡುತ್ತಾ ಬಂದಿದ್ದೇವೆ. ಆದರೆ ಪತ್ರಿಕೆಗಳಲ್ಲಿ ನಮ್ಮ ಹೆಸರುಗಳು ಪ್ರಕಟವಾಗುತ್ತಿವೆ. ಹೀಗೆ ಹಲವಾರು ಬಾರಿ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ನಾನು ಸಲ್ಲಿಕೆ ಮಾಡಿದ್ದರ ಬಗ್ಗೆ ಅವರಿಂದಲೇ ರಿಸೀವ್ಡ್ ಎಂದು ಸಹಿ ಮಾಡಿ ಸೀಲು ಹಾಕಿದ ಸ್ವೀಕೃತಿಪತ್ರವನ್ನು ಇಟ್ಟುಕೊಂಡಿದ್ದೇನೆ. ಇದರ ಬಗ್ಗೆ ಸರಕಾರದವರ ಕ್ರಮಗಳೇನು? ಇದರಿಂದಾಗಿ ಸಾರ್ವಜನಿಕರಲ್ಲಿ ಶಾಸಕರುಗಳ ಬಗ್ಗೆ ತಪ್ಪುಕಲ್ಪನೆ ಮೂಡುತ್ತದೆ. ಶಾಸಕರುಗಳು ಮಂತ್ರಿಗಳು ವಿವರಗಳನ್ನು ಕೊಟ್ಟಿದ್ದೂ ಕೊಡಲಿಲ್ಲವೆಂದು ಹೇಳಿದರೆ, ಸಾರ್ವಜನಿಕ ವಲಯದಲ್ಲಿ ನಮ್ಮ ಬಗ್ಗೆ ಸಂಶಯಾಸ್ಪದ ವಾತಾವರಣ ಮೂಡುತ್ತದೆ. ಆದ್ದರಿಂದ ವಿವರಗಳನ್ನು ಸಲ್ಲಿಸಿದವರ ಬಗ್ಗೆ ಒಂದು ಗೌರವಯುತವಾದ ವಾತಾವರಣವು ಇರಬೇಕೆಂಬ ಬಗ್ಗೆ ತಾವುಗಳು ಯಾವ ಕ್ರಮವನ್ನು ಕೈಗೊಳ್ಳುತ್ತೀರಿ ಎಂಬುದನ್ನು ದಯಮಾಡಿ ತಿಳಿಸಬೇಕು.

ಅಧ್ಯಕ್ಷರು: ಅದು ದುರ್ದೈವದ ಸಂಗತಿ. ವಿವರಗಳನ್ನು ಸಕಾಲದಲ್ಲಿ ಸಲ್ಲಿಸಿದ್ದರೂ ಕೂಡ ಹೀಗೆ ಕೊಟ್ಟಿಲ್ಲವೆಂದು ಪತ್ರಿಕೆಗಳಲ್ಲಿ ಕೊಡುವುದು ಸರಿಯಲ್ಲ. ಅದನ್ನು ನಾನು ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ: ಈಗಿರುವ ವ್ಯವಸ್ಥೆಯಲ್ಲಿ ಏನು ಶಿಕ್ಷೆ ಮಾಡಬಹುದೆಂದರೆ ಅದು ಪತ್ರಿಕೆಗಳಲ್ಲಿ ಪ್ರಕಟ ಮಾಡುವುದು ಅಷ್ಟೇ. ಅದನ್ನು ಬಿಟ್ಟು ಬೇರೆ ಏನೂ ಇಲ್ಲ. ಅದಕ್ಕಾಗಿಯೇ ಎಲ್ಲಾದರೂ ಪ್ರೊಸೀಸ್‌ನಲ್ಲಿ ತಪ್ಪಾಗಿದೆಯೇ ಹೊರತು ಬೇರೆ ಏನೂ ಇರಲಾರದು. ಅಂಥಾದ್ದು ಇದ್ದರೆ ಅವುಗಳನ್ನು ವೆರಿಫೈ ಮಾಡಿಸಿ ಸರಿಪಡಿಸುತ್ತೇವೆ. ನನ್ನ ವಿವರ ಸಲ್ಲಿಕೆಯಲ್ಲೂ ಕೂಡ 150-200 ರೂಪಾಯಿಗಳ ತನಕ ಬಾಕಿ ಇದೆ ಎಂದು ಬಂದಿತ್ತು. ನಂತರ ನಾನು ನಮ್ಮ ಕಚೇರಿಯವರನ್ನು ಕಳುಹಿಸಿ ರಿಸೀಟ್ ಹಾಕಿಸಿ ಇನ್ನು ಮುಂದೆ ನಮ್ಮ ಹೆಸರನ್ನು ಪತ್ರಿಕೆಗಳಲ್ಲಿ ಪ್ರಸಿದ್ಧಿ ಮಾಡಬೇಡಿ ಎಂದು ಹೇಳಿ ಬರಬೇಕಾಯಿತು. ಅಂಥ ಪ್ರಕರಣಗಳು ಆಗಿವೆ. ಅವುಗಳನ್ನು ಸರಿಪಡಿಸುತ್ತೇವೆ.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಚಂದ್ರೇಗೌಡರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ತಮ್ಮ ಬಜೆಟ್‌ನಲ್ಲಿಯೂ ಕೂಡ ಭ್ರಷ್ಟಾಚಾರ ನಿಯಂತ್ರಣ ಮಾಡಬೇಕೆಂದು ಹೇಳಿದ್ದಾರೆ. ಇದು ಎಲ್ಲರಲ್ಲೂ ಇರುವ ಒಂದು ಕಳಕಳಿ. ಲೋಕಾಯುಕ್ತವು ಇದನ್ನು ನಿಯಂತ್ರಣ ಮಾಡುವಲ್ಲಿ ಇರುವ ಒಂದು ಅಸ್ತ್ರ; ಒಂದು ಸಂಸ್ಥೆ. ಲೋಕಾಯುಕ್ತವು ಇಂಥ ಅಸ್ತ್ರವಾಗಿರುವಾಗ ಆ ಅಸ್ತ್ರಕ್ಕೆ ನಾವು ಸಾಕಷ್ಟು ಶಕ್ತಿಯನ್ನು ಕೊಡುತ್ತಾ ಇದ್ದೇವೆಯೇ? ಸಮಾಜದಲ್ಲಿ ಭಯ ಇಲ್ಲದಿರುವುದು, ನಾಚಿಕೆ ಇಲ್ಲದೇ ಇರುವುದೇ ಭ್ರಷ್ಟಾಚಾರ ನಡೆಯಲು ಪ್ರಮುಖ ಕಾರಣಗಳು. ನಾಚಿಕೆಯೇ ಇಲ್ಲದಿರುವಾಗ ಭಯ ಎಲ್ಲಿಂದ ತರಬೇಕು? ಲೋಕಾಯುಕ್ತದ ಮೇಲೆ ಯಾರಿಗೆ ಭಯವಿದೆ? ಲೋಕಾಯುಕ್ತದವರು ರೈಡ್ ಮಾಡಿದರು ಎಂದು ಕೂಡಲೇ ಪತ್ರಿಕೆಗಳಲ್ಲಿ ಬರುತ್ತದೆ. ಅದಾದಮೇಲೆ ಭಯವೂ ಕೂಡ ದಿನಕಳೆದಂತೆ ಡೈಲ್ಯೂಟ್ ಆಗುತ್ತಾ ಹೋಗುತ್ತದೆ. ಯಾರ್ಯಾರನ್ನು ಲೋಕಾಯುಕ್ತದವರು ರೈಡ್ ಮಾಡಿದರು ಅಂಥವರಿಗೆ ಒಳ್ಳೆಯ ಪೋಸ್ಟಿಂಗ್ಸ್ ಮತ್ತು ಪ್ರಮೋಶನ್ಸ್‌ಗಳು ಫಸಿಲ್‌ಮೆಂಟ್ ಬದಲು ಆಗುತ್ತವೆ. ಒಳ್ಳೆಯ ಹುದ್ದೆಗೆ ತಪ್ಪಿತಸ್ಥರನ್ನು ಪೋಸ್ಟಿಂಗ್ ಮಾಡುವುದು ಅಥವಾ ಒಳ್ಳೆಯ ಹುದ್ದೆಗೆ ಪ್ರಮೋಶನ್ ಕೊಡುವುದು ಈಗ ಇರುವ ವ್ಯವಸ್ಥೆ ಎಂಬಂತೆ ಇದೆ. ಹೀಗಿರುವಾಗ ಈ ಕುರಿತು ನಾವೆಲ್ಲರೂ ಕೂಡ ಯೋಚನೆ ಮಾಡಬೇಕಾಗಿದೆ. ನೀವು ಸ್ವಲ್ಪ ಅಂಕಿಅಂಶಗಳನ್ನು ಕೊಟ್ಟಿದ್ದೀರಿ. ಲೋಕಾಯುಕ್ತ ಕೂಡ is a useless, teethless organisation ಎಂಬ ಒಂದು ಭಾವನೆ ಬಂದಿದೆ. ಹಾಗೆಯೇ ಮಾನ್ಯ ಸದಾನಂದಗೌಡರು ಹೇಳಿದ ಹಾಗೆ ಯಾರು ತಪ್ಪು ಮಾಡಿಲ್ಲವೋ ಅವರ ಹೆಸರುಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸುವುದು. ಈ ದೃಷ್ಟಿಯಿಂದ ನಾವೆಲ್ಲರೂ ಸೇರಿ ಒಂದು ಕಲೆಕ್ಟಿವ್ ಥಿಂಕಿಂಗ್‌ಗೆ ಬರಬೇಕು. ಸಮಾಜದಲ್ಲಿ ಭಯ ಮತ್ತು ನಾಚಿಕೆ ಬರುವುದಕ್ಕೋಸ್ಕರ ಇರುವ ಒಂದು ಸಂಸ್ಥೆ ಲೋಕಾಯುಕ್ತ. ಅದನ್ನು ಬಲಪಡಿಸಬೇಕು. ಹಾರ್ನಳ್ಳಿ ರಾಮಸ್ವಾಮಿಯವರ ರೆಕಮಂಡೇಶನ್ಸ್ ಬಗ್ಗೆ ತಾವುಗಳು ಹೇಳಿದ್ದೀರಿ. ಅವುಗಳನ್ನು ನಾವುಗಳು ಬಹಳ ಗಂಭೀರವಾಗಿ ತೆಗೆದುಕೊಂಡು, are you serious? Whether can we implement it? ಹಾಗೆ ಮಾಡಿದಾಗ ಮಾತ್ರ ಇದು ಸಾಧ್ಯವಾಗುತ್ತದೆ.

1.20 ಪಿಎಂ

ಶ್ರೀ ವೈ.ಕೆ. ರಾಮಯ್ಯ: ಮಾನ್ಯ ಅಧ್ಯಕ್ಷರೆ 1983-84ರಿಂದ ನನಗೆ ಈ ಪ್ರಶ್ನೆ ಕಾಡುತ್ತಿದೆ. ಲೋಕಾಯುಕ್ತಕ್ಕೆ ಎಲ್ಲಾ ಶಾಸಕರೂ ತಮ್ಮ ಆಸ್ತಿ ವಿವರಗಳನ್ನು ಕೊಡಬೇಕು ಎನ್ನುವುದು ಒಂದು

ನಿಯಮ. ಈ ನಿಯಮಕ್ಕೆ ತಪ್ಪಿದರೆ ವಿವರವನ್ನು ಕೊಡದೇ ಇದ್ದರೆ ಶಿಕ್ಷೆ ಏನು ಸ್ವಾಮಿ? ಆ ಶಿಕ್ಷೆ ಕೊಡುವುದರಿಂದ ಈಗಿನ ಪರಿಸ್ಥಿತಿಯಲ್ಲಿ ಈ ಕಾನೂನನ್ನು ಏನಾದರೂ ಅನುಸರಿಸುವುದಕ್ಕೆ ಸಾಧ್ಯವಾಗುತ್ತದಾ? ಪತ್ರಿಕೆಯಲ್ಲಿ ಪ್ರಕಟಣೆ ಮಾಡುವಂತಹ ಶಿಕ್ಷೆಯನ್ನು ಕೊಡುವುದರಿಂದ ಈಗಿನ ಪರಿಸ್ಥಿತಿಯಲ್ಲಿ ಯಾರನ್ನಾದರೂ ಒಬ್ಬ ವ್ಯಕ್ತಿಯನ್ನು ಕಾನೂನಿನ ಚೌಕಟ್ಟಿನಲ್ಲಿ ತಂದು ಶಿಕ್ಷೆ ಮಾಡಲಿಕ್ಕೆ ಸಾಧ್ಯವಾಗುತ್ತದಾ? ಆದ್ದರಿಂದ ನಾನು ಹತ್ತಾರು ವರ್ಷದಿಂದ ಕೇಳುತ್ತಿದ್ದೇನೆ. ಮೂರೇ ಮೂರು ಬಾರಿ ಪತ್ರಿಕೆಯಲ್ಲಿ ಹೆಸರನ್ನು ಪ್ರಕಟಣೆ ಮಾಡುವುದರಿಂದ ಅದು ಸಾಧ್ಯವಾಗುವುದಿಲ್ಲ. ಕೊನೆಯಪಕ್ಷ ಅವರ ಸದಸ್ಯತ್ವವನ್ನು ಕಳೆದುಕೊಳ್ಳುವ ತರಹ ಅಮೆಂಡ್‌ಮೆಂಟ್ ತನ್ನಿ. ಇಲ್ಲ ಅವರ ಸಂಬಳವನ್ನು ಕಡಿತ ಮಾಡುವ ತರಹ ಅಮೆಂಡ್‌ಮೆಂಟ್ ತನ್ನಿ. ಇವೆರಡು ಬದಲಾವಣೆ ಮಾಡುವವರೆಗೆ ಈ ನಾಡಿನ ಕಾನೂನು, ಯಾವುದು ಏನು ಬೇಕಾದರೂ ಶಿಕ್ಷೆ ನನಗೆ ಮಾಡಬಹುದು. ನಾನಂತೂ ವಿವರಗಳನ್ನು ಕೊಡುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ರಾಮಯ್ಯನವರು ಪ್ರಶ್ನೆಯನ್ನೂ ಕೇಳಿದರು. ಉತ್ತರವನ್ನೂ ಅವರೇ ಹೇಳಿದರು. ನಾನು ವಿವರ ಕೊಡುವುದೇ ಇಲ್ಲ ನೀವು ಶಿಕ್ಷೆ ವಿಧಿಸುವವರೆಗೆ ಎಂದರೆ, ವಿವರ ಕೊಡದೇ ಇರುವವರಿಗೆ ನಾವು ಏನು ಮಾಡಬಹುದು? ಅದಕ್ಕಾಗಿ ಸಾರ್ವಜನಿಕ ಚರ್ಚೆ ಆಗಬೇಕು.

SRI Y.K. RAMAIAH: Then, why do you have that useless rules?

ಶ್ರೀ ಡಿ.ಬಿ. ಚಂದ್ರೇಗೌಡ: ಪತ್ರಿಕೆಯಲ್ಲಿ ಬರುವಂತಹ ದೊಡ್ಡ ಶಿಕ್ಷೆ ಅಥವಾ ಒಂದು ಅವಮಾನದ ಪ್ರಸಂಗ ಮತ್ತೊಂದು ಇಲ್ಲ. ಆದರೆ ಆ ವ್ಯಾಪ್ತಿಯನ್ನು ಮೀರಿ ಬಿಟ್ಟಿದ್ದೇವೆಂದಾದರೆ ನಾವು ಏನು ಮಾಡುವುದಕ್ಕೆ ಬರುತ್ತದೆ? ಅದಕ್ಕಾಗಿಯೇ ಅಡ್ಮಿನಿಸ್ಟ್ರೇಟೀವ್ ರಿಫಾರ್ಮ್ಸ್ ಕಮೀಷನ್ ಮಾನ್ಯ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಮಾಡಿದ್ದು, ಅವರು ಕೆಲವು ನಿಯಮಗಳನ್ನು ಕಳಿಸಿದ್ದಾರೆ. ತಿದ್ದುಪಡಿಗೆ ಸೂಕ್ತ ಮಾರ್ಗದರ್ಶನವನ್ನು ಮಾಡಿದ್ದಾರೆ. ಅಗತ್ಯ ಬಿದ್ದರೆ ಅದನ್ನು ಸಾಧ್ಯವಾದಷ್ಟು ಬೇಗ ನಾವು ಅಂತಹ ತಿದ್ದುಪಡಿಗಳನ್ನು ತಂದು ಶಿಕ್ಷೆ ವಿಧಿಸುವುದಕ್ಕೆ ನೀವೆಲ್ಲ ಒಪ್ಪಿದರೆ ಯಾರು ಬೇಡ ಎನ್ನುತ್ತಾರೆ. ಅದನ್ನು ಮಾಡುವುದಕ್ಕೆ ಸರ್ಕಾರ ಸಿದ್ಧ ಇದೆ.

ಶ್ರೀ ಸಿ. ಭೈರೇಗೌಡ: ಮಾನ್ಯ ಅಧ್ಯಕ್ಷರೆ, ನಮ್ಮ ಕಡೆಯಲ್ಲಿ ಒಂದು ಗಾದೆ ಇದೆ. "ಮೂರೂ ಬಿಟ್ಟವರು ಊರಿಗೆ ದೊಡ್ಡವರು" ಎಂದು. ಏನು ಮಾಡುವುದಕ್ಕೆ ಆಗುತ್ತದೆ. ಊರಿಗೆ ದೊಡ್ಡವರು ಅಷ್ಟೇ.

ಅಧ್ಯಕ್ಷರು: ಮಾನ್ಯ ಹನುಮೇಗೌಡರೇ ಎಲ್ಲದಕ್ಕೂ ಉತ್ತರ ಕೊಟ್ಟಿದ್ದಾರೆ.

ಶ್ರೀ ಕೆ.ಎಚ್. ಹನುಮೇಗೌಡ: ಮಾನ್ಯ ಅಧ್ಯಕ್ಷರೆ, ಲೋಕಾಯುಕ್ತದಲ್ಲಿ ನಡೆದ ಎರಡು ಸಣ್ಣ ತೀರ್ಪನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು: ಆರು ಗಂಟೆಯವರೆಗೆ ಬೇಕಾದರೆ ಕುಳಿತುಕೊಳ್ಳೋಣ ನನಗೇನೂ ಅಭ್ಯಂತರವಿಲ್ಲ. ಯಾವ್ಯಾವ ಮೆಂಬರ್‌ದ್ದು ಇದೆ, ಅವರೆಲ್ಲರಿಗೂ ಅಲೋ ಮಾಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್: ಪ್ರತಿ ದಿವಸ ಲಾಸ್ಟ್ ಡೇ ಆದರೆ ಚೆನ್ನಾಗಿರುತ್ತದೆ.

ಅಧ್ಯಕ್ಷರು: ಕೊನೆಯ ದಿವಸ ಆದ್ದರಿಂದ ಅಲೋ ಮಾಡಬೇಕಾದ್ದು ನನ್ನ ಕರ್ತವ್ಯ ತಾನೆ. ಕೊನೆಯ ದಿವಸ ಎಂದು ಹೇಳಿ ಸ್ವಲ್ಪ ಹೆಚ್ಚಿಗೆ ಅವಕಾಶ ಕೊಡುತ್ತಿದ್ದೇನೆ. ಆಮೇಲೆ ಅವರು ಪ್ರಶ್ನೆಯನ್ನೂ ಕೇಳುವ ಹಾಗೆ ಇಲ್ಲ. ನೀವು ಉತ್ತರವನ್ನೂ ಇವತ್ತು ಸದನ ಮುಗಿದರೆ ಹೇಳುವ ಹಾಗೆ ಇಲ್ಲ.

ಶ್ರೀ ಕೆ.ಎಚ್. ಹನುಮೇಗೌಡ: ಮಾನ್ಯ ಅಧ್ಯಕ್ಷರೇ, ಲೋಕಾಯುಕ್ತ ಇರುವುದು ಭ್ರಷ್ಟಾಚಾರ ನಿರ್ಮೂಲನಕ್ಕೆ ಎನ್ನುವ ಒಂದು ತತ್ವಕ್ಕೆ ನಾನೂಕೂಡ ಒಪ್ಪುತ್ತೇನೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ಒಂದು ವಿಚಾರ ರೆಫರ್ ಆಗಿತ್ತು. ಜಡ್ಜ್‌ಮೆಂಟೂ ಆಗಿತ್ತು. ಮಾನ್ಯ ಅಧ್ಯಕ್ಷರ ಅನುಮತಿ ತೆಗೆದುಕೊಂಡು ಆ ಉದಾಹರಣೆಯನ್ನು ಹೇಳಿಬಿಡುತ್ತೇನೆ. ಉತ್ತರ ಕರ್ನಾಟಕದ ಎಕ್ಸಿಕ್ಯೂಟೀವ್ ಇಂಜಿನಿಯರ್ ಆಫೀಸ್‌ನಲ್ಲಿ ಒಬ್ಬ ಸ್ಟೋರ್ ಕೀಪರ್ ಇದ್ದರು. ಮಂತ್ ಎಂಡ್‌ನಲ್ಲಿ ಎಲ್‌ಓಸಿ ಬಂತು ಎಂದು ಹೇಳಿ 12 ಲಕ್ಷ ರೂಪಾಯಿಗೆ...

ಅಧ್ಯಕ್ಷರು: ಈ ವಿಚಾರ ಏನಾದರೂ ಕೋರ್ಟಿನಲ್ಲಿದ್ದರೆ ಸಬ್ ಜ್ಯುಡೀಸ್ ಆಗುತ್ತದೆ. ದಯವಿಟ್ಟು ಸಬ್ ಜ್ಯುಡೀಸ್ ಆಗುವುದನ್ನು ಇಲ್ಲಿ ಪ್ರಸ್ತಾಪ ಮಾಡಬೇಡಿ.

ಶ್ರೀ ಕೆ.ಎಚ್. ಹನುಮೇಗೌಡ: ಮುಗಿದು ಹೋಗಿದೆ. ಜಡ್ಜ್‌ಮೆಂಟ್ ಹೇಳುತ್ತಿದ್ದೇನೆ. Mr. he if it is pending before the Court, it will amount to subjudice.

ಶ್ರೀ ಕೆ.ಎಚ್. ಹನುಮೇಗೌಡ: ಕೇಸ್ ಪೆಂಡಿಂಗ್ ಇಲ್ಲ. ಜಡ್ಜ್‌ಮೆಂಟ್ ವಿಚಾರ ಹೇಳುತ್ತಿದ್ದೇನೆ. 6 ಲಕ್ಷ ರೂಪಾಯಿ ಸಿಮೆಂಟ್, 6 ಲಕ್ಷ ರೂಪಾಯಿನ ಸ್ಟೀಲನ್ನು ಕೊಂಡು ಹಾಕಿದ್ದರು. ಎರಡು ವರ್ಷ ಅಲ್ಲೇ ಬಿದ್ದಿತ್ತು. ಆ ಸ್ಟೋರ್ ಕೀಪರ್ ಯೋಚನೆ ಮಾಡಿದ. ಎಲ್ಲರೂ ಮನೆಯನ್ನು ಕಟ್ಟಿಕೊಂಡಿದ್ದಾರೆ, ನನಗೆ ಮನೆ ಇಲ್ಲ ಎಂದು ಹೇಳಿ ಮನೆ ಕಟ್ಟಿಕೊಂಡ. ಒಂದು ವರ್ಷ ಕಳೆಯಿತು. ಯಾರೋ ಅರ್ಜಿ ಕೊಟ್ಟರು. ಬಂದು ನೋಡಿದರು, ಇನ್ಸ್‌ಪೆಕ್ಟ್ ಮಾಡಿದರು. ಅಲ್ಲಿ ಏನೂ ಇರಲಿಲ್ಲ. ಆದರ ಮೇಲೆ ಬೇರೆಯವರನ್ನು ಅಲ್ಲಿ ಪೋಸ್ಟ್ ಮಾಡಿದರು. ಪೋಸ್ಟ್ ಮಾಡಿದ ಕೂಡಲೇ ಈತ ಛಾರ್ಜ್ ಕೊಡದೇ ಓಡಿ ಹೋಗಿ ಬಿಟ್ಟ. ಬೀಗವನ್ನು ಒಡೆದು ಮಹಜರ್ ಮಾಡಿ ಇವನು ಇಷ್ಟು ಲಕ್ಷ ರೂಪಾಯಿಯ ಸಿಮೆಂಟ್ ಮತ್ತು ಸ್ಟೀಲನ್ನು ಮಿಸ್ ಯೂಸ್ ಮಾಡಿಕೊಂಡಿದ್ದಾನೆ, ಓಡಿ ಹೋಗಿದ್ದಾನೆಂದು ಮಹಜರ್ ಮಾಡಿ ಬೇರೆಯವರಿಗೆ ಛಾರ್ಜ್ ಕೊಟ್ಟರು. ಇದನ್ನು ಏನು ಮಾಡುವುದು ಹೇಳಿ ಎರಡು ವರ್ಷ ಎಕ್ಸಿಕ್ಯೂಟೀವ್ ಇಂಜಿನಿಯರ್ ಮತ್ತು ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ ಯೋಚನೆ ಮಾಡಿದರಂತೆ. ಆಮೇಲೆ ಕೊನೆಗೆ ಲೋಕಾಯುಕ್ತಕ್ಕೆ ವಿಷಯವನ್ನು ರೆಫರ್ ಮಾಡಿದರು. ಅವರು ಆರು ವರ್ಷ ಎನ್‌ಕ್ವೈರಿ ಮಾಡಿ ಇವನು ನಿರಪರಾಧಿ ಎಂದು ಹೇಳಿ ಜಡ್ಜ್‌ಮೆಂಟ್ ಕೊಟ್ಟರು, ಅವನಿಗೆ ಪ್ರೋಮೋಷನ್ ಆಯಿತು. ಆಮೇಲೆ ನಾನು ಚೀಫ್ ಇಂಜಿನಿಯರ್ ಅವರನ್ನು ಕೇಳಿದೆ. ಸ್ವಾಮಿ 12 ಲಕ್ಷ ರೂಪಾಯಿ ಯಾರದ್ದು ದುಡ್ಡು ಎಂದು ಕೇಳಿದೆ. ಅವರು ಹೋಯಿತು ಸ್ವಾಮಿ ಎಂದರು. ಇದಕ್ಕೆ ಲೋಕಾಯುಕ್ತ ಬೇಕಾ? ಇಂತಹವು ಎಷ್ಟು ಜಡ್ಜ್‌ಮೆಂಟ್‌ಗಳು ಆಗಿವೆ? ಇಂತಹವು ಬೇಕಾದಷ್ಟು ಆಗಿದೆ. ಅವರು ಅವಕಾಶ ಕೊಟ್ಟರೆ ಇನ್ನೂ ಹೇಳುತ್ತೇನೆ.

ಅಧ್ಯಕ್ಷರು: ನಮ್ಮ ಮುಂದೆ ಇನ್ನೂ ಮೂರು ಪ್ರಶ್ನೆ ಇದೆ.

ಶ್ರೀ ಕೆ.ಎಚ್. ಹನುಮೇಗೌಡ: ಈಗೇನು ಮಾಡುತ್ತೀರಿ? ಸರ್ಕಾರದವರು ದಯವಿಟ್ಟು ಹೇಳಿ. ಸಚಿವರು ಹೇಳಬೇಕು.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಭ್ರಷ್ಟಾಚಾರ ಮಾಡಿದಂತಹ ಅಧಿಕಾರಿಗಳಿಗೆ ಶಿಕ್ಷೆ ಮಾಡಬೇಕು ಎಂದರೆ ಆ ಲೋಕಾಯುಕ್ತಕ್ಕೆ ಯಾರನ್ನಾದರೂ ಒಬ್ಬ ಜನಪ್ರತಿನಿಧಿಯನ್ನು ಛೇರ್ಮನ್ ಆಗಿ ಮಾಡಬೇಕು ಎಂದರೆ ಮಾನ್ಯ ಹನುಮೇಗೌಡರನ್ನು ಮಾಡಿ. ನಿಜವಾಗಿ ಶಿಕ್ಷೆ ಆಗುತ್ತದೆ. ನಿಜವಾಗಿ ಅವರು ತಪ್ಪು ಮಾಡಿದವರನ್ನು ಜೈಲಿಗೆ ಕಳಿಸುತ್ತಾರೆ.

ಅಧ್ಯಕ್ಷರು: ಅವರೆಲ್ಲರೂ ಏನು ಹೇಳಿದ್ದಾರೆ. ಅದಕ್ಕೆ ಸಮಗ್ರವಾದಂತಹ ಉತ್ತರವನ್ನು ಹೇಳಿ ಬಿಡಿ.

ಶ್ರೀ ಜೆ.ಡಿ ನಾಯಕ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಈಗ ಉತ್ತರವನ್ನು ಕೊಡುವಾಗ ಹೇಳುತ್ತಿದ್ದರು ಈ ವಿಚಾರದಲ್ಲಿ ನನಗೆ ಒಂದು ಕ್ಲಾರಿಫಿಕೇಷನ್ ಬೇಕಾಗಿದೆ. ಶಾಸಕರು ಒಂದು ಅವಧಿಗೆ ಆಸ್ತಿ ಪಾಸ್ತಿ ಘೋಷಣೆ ಮಾಡಬೇಕೇ ಅಥವಾ ಪ್ರತಿ ವರ್ಷಕ್ಕೆ ಆಸ್ತಿ ಘೋಷಣೆ ಮಾಡಬೇಕೇ ಎನ್ನುವುದನ್ನು ದಯಮಾಡಿ ಸ್ಪಷ್ಟಪಡಿಸಬೇಕು ಎಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಪ್ರತಿ ವರ್ಷ ಘೋಷಣೆ ಮಾಡಬೇಕು. ಈ ವರ್ಷ ಜೂನ್ ಎಂಡ್ ಒಳಗೆ ಕೊಡಬೇಕು. ಏಪ್ರಿಲ್, ಮೇ, ಜೂನ್ ಎಂಡ್ ಒಳಗೆ ಕೊಡಬೇಕು. ತಾವೆಲ್ಲರೂ ಜ್ಞಾಪಕದಲ್ಲಿ ಇಟ್ಟು ಕೊಳ್ಳಿ. ಜೂನ್ ಎಂಡ್ ಒಳಗೆ ಕೊಡಬೇಕು.

ಶ್ರೀ ಜೆ.ಡಿ. ನಾಯಕ್: ಮಾನ್ಯ ಮಂತ್ರಿಗಳು ಶಾಸಕರ ಅವಧಿಯಲ್ಲಿ ವಿವರ ಕೊಟ್ಟರೆ ಸಾಕು ಎಂದು ಹೇಳಿದ್ದರು.

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಹನುಮೇಗೌಡರು ಸ್ವಲ್ಪ ದಾಖಲೆಗಳನ್ನು ಕಳಿಸಿದರೆ ಆಲೋಚನೆ ಮಾಡಬಹುದು. ಮುಗುಂ ಆಗಿ ಹೀಗೆ ಆಗಿತ್ತು ಎಂದು ಹೇಳಿದರೆ ಮೂರು ಲಕ್ಷ ರೂಪಾಯಿ ತಿಂದರು ಎಂದರೆ ಹೇಗೆ? ನನಗೆ ಗೊತ್ತಿಲ್ಲ ಎಂದು ಹೇಳಿದೆ.

ಅಧ್ಯಕ್ಷರು: ರಿಪೋರ್ಟ್ ಯಾವುದು? ಡೇಟ್ ಯಾವುದು ಎಂದು ಅವರಿಗೆ ವಿವರ ಕೊಡಿ.

ಶ್ರೀ ಕೆ.ಎಚ್. ಹನುಮೇಗೌಡ: ಅದೆಲ್ಲಾ ಕೊಡುತ್ತೇನೆ.

ಅಧ್ಯಕ್ಷರು: ನೀವು ಸಮಗ್ರವಾಗಿ ಉತ್ತರ ಕೊಟ್ಟು ಬಿಡಿ. ಮಾನ್ಯ ಗುರುಸ್ವಾಮಿ ಅವರೆ, ಎಲ್ಲ ಮುಗಿದ ಮೇಲೆ ಕೇಳುತ್ತೀರಲ್ಲ. ಸಂತೆ ಮುಗಿದ ಮೇಲೆ ಬರುತ್ತೀರಲ್ಲ.

ಶ್ರೀ ಎ.ಎಸ್. ಗುರುಸ್ವಾಮಿ: ದಯವಿಟ್ಟು ಒಂದೇ ಒಂದು ನಿಮಿಷ ಅವಕಾಶ ಕೊಡಿ. ಒಂದು ಪ್ರಾರ್ಥನೆ ಇದೆ. ನಾನು ಸರ್ಕಾರದವರಲ್ಲಿ ಒಂದು ಮನವಿ ಮಾಡಿಕೊಳ್ಳಬೇಕಾಗಿದೆ. ಈಗೇನು ಲೋಕಾಯುಕ್ತಕ್ಕೆ ಆಕ್ಟ್ ಮಾಡಿದ್ದೀರಿ. ಇದರಲ್ಲಿ ನಾನು ಎರಡು ಮೂರು ಸಲಹೆಗಳನ್ನು ಕೊಡಲು ಇಚ್ಛೆ ಪಡುತ್ತೇನೆ.

ಅಧ್ಯಕ್ಷರು: ಬೇಕಾದರೆ ನೀವು ಆಮೇಲೆ ಮಾತನಾಡಿ. ಜೀರೋ ಅವರ್‌ನಲ್ಲಿ ಮಾತನಾಡಿ. ಇದು ಪ್ರಶ್ನೋತ್ತರ. ನೀವು ಸಪ್ಲಿಮೆಂಟರಿ ಮಾತ್ರ ಕೇಳಿ.

SRI A.S. GURUSWAMY: Will the Hon'bleMinister tell me whether he can suspend the accounts and properties of the persons who have been detained or trapped? To those who give information about the illegal assests, some percentage of total property recovered may be given as comission or incentive. ಆ ಇನ್‌ಫಾರ್ಮರ್‌ಗೆ ಏನಾದರೂ ಒಂದು ಇನ್‌ಸೆಂಟೀವ್ ಸಿಗುತ್ತದಾ? ಟೋಟಲ್ ಪ್ರಾಪರ್ಟಿ ರೆಕವರಿ ಆಗುವುದರಲ್ಲಿ ಏನಾದರೂ ಕಮೀಷನ್ ಅಥವಾ ಇನ್‌ಸೆಂಟೀವ್ ಕೊಡಲಿಕ್ಕೆ ಪ್ರಾವಿಜನ್ ಇದೆಯಾ? ಪ್ರಾವಿಜನ್ ಮಾಡುತ್ತೀರಾ ಎಂದು ನನ್ನ ಪ್ರಶ್ನೆ.

ಡಾ: ಜಿ. ಪರಮೇಶ್ವರ್: ಸನ್ಮಾನ್ಯ ಅಧ್ಯಕ್ಷರೆ, ನಾನು ಮೊದಲೇ ಹೇಳಿದ ಹಾಗೆ ಇದು ಬಹಳ ಪ್ರಾಮುಖ್ಯತೆಯಾದ ವಿಷಯ. ಆಡ್ಮಿನಿಸ್ಟ್ರೇಟಿವ್ ಸರ್ಕಾರ್ಸ್‌ನಲ್ಲಿ, ಆಡ್ಮಿನಿಸ್ಟ್ರೇಟಿವ್ ರಿಫಾರ್ಮಸ್‌ನಲ್ಲಿ ಬಹಳ ಪ್ರಾಮುಖ್ಯವಾಗಿರತಕ್ಕ ವಿಷಯ. ಅದಕ್ಕಾಗಿ ಈಗ ನಾವು ಸರ್ಕಾರದಲ್ಲಿ ಆಡಳಿತ ಸುಧಾರಣಾ ಪ್ರಯೋಗವನ್ನು ಮಾಡಿದ್ದೇವೆ. ಆ ಪ್ರಯೋಗವನ್ನು ರಚನೆ ಮಾಡಿರತಕ್ಕದ್ದೇ ಇವೆಲ್ಲವನ್ನೂ ಕೂಡ ಗಮನ ಹರಿಸಿ ಮಾಡಿರತಕ್ಕದ್ದು. ಕಂಪ್ಯೂಟರೈಸೇಷನ್ ಮಾಡುವಂಥದ್ದು, ಇನ್‌ಫರ್ಮೇಷನ್ ಸ್ಟೋರ್ ಮಾಡಿರತಕ್ಕದ್ದು. ಪ್ರತಿ ಒಬ್ಬರ ಆಸ್ತಿ ವ್ಯವಹಾರಗಳನ್ನು ಕೂಡ ಡೇಟಾ ಡಿಸ್ಕ್‌ನಲ್ಲಿ ಅಳವಡಿಸುವಂಥದ್ದು. ಇದಕ್ಕೆಲ್ಲ ಕೂಡ ನಾವು ಟ್ರಾನ್ಸಫರೆನ್ಸಿ ಆಕ್ಟ್‌ನ್ನು ಕೂಡ ತಂದಿದ್ದೇವೆ. ಇದು ಆಡಳಿತಾತ್ಮಕವಾಗಿ ಒಂದು ಹೊಸ ಬದಲಾವಣೆಯನ್ನು ತರತಕ್ಕದ್ದು, ನಮ್ಮ ಸರ್ಕಾರ ಇವತ್ತು ಹಾಕಿಕೊಂಡಿರತಕ್ಕ ಕಾರ್ಯಕ್ರಮ. ಆದ್ದರಿಂದ ಮಾನ್ಯ ಸದಸ್ಯರುಗಳೇನು ಬಹಳಷ್ಟು ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ. ಇವೆಲ್ಲವುದರ ಬಗ್ಗೆ ಗಮನ ಹರಿಸುತ್ತೇವೆ. ಈಗೇನು ಹಾಗಹಳ್ಳಿ ರಾಮಸ್ವಾಮಿಯವರು ಕೊಟ್ಟಿರತಕ್ಕಂಥ ಶಿಫಾರಸ್ ಜೊತೆಗೆ ಮಾನ್ಯ ರಾಮಯ್ಯನವರು ಬಹಳ ಕಟುಮಾತಿಗೆ ಹೇಳಿದರು. ನಾನೇನು ವಿವರ ಕೊಡುವುದಿಲ್ಲ. ಏನು ಮಾಡುತ್ತೀರೋ ಮಾಡಿಕೊಳ್ಳಿ ಎಂದರು. ಈ ಅಭಿಪ್ರಾಯಕ್ಕೆ ಬರತಕ್ಕದ್ದು ಅಲ್ಲ. ಏಕೆಂದರೆ ಅಧಿಕಾರಿಗಳು ಕೂಡ ಇವನ್ನೇ ಹೇಳಿದರೆ ಬಹಳ ಕಷ್ಟ ಆಗುತ್ತದೆ. ಆದ್ದರಿಂದ ಅದಕ್ಕೆ ಸೂಕ್ತವಾದ ಕಾನೂನಿನ ಚೌಕಟ್ಟಿನಲ್ಲಿ ಸೂಕ್ತವಾದ ಅಮೆಂಡ್‌ಮೆಂಟನ್ನು ತರಬೇಕು.

ಶ್ರೀ ವೈ.ಕೆ. ರಾಮಯ್ಯ: ಅಧಿಕಾರಿಗಳಿಗೆ ಕಾನೂನಿನಲ್ಲಿ ಶಿಕ್ಷೆ ಕೊಡಲಿಕ್ಕೆ ಬೇರೆ ಅವಕಾಶ ಇದೆ. ಅವರನ್ನು ಜೈಲಿಗೆ ಕಳಿಸಬಹುದು. For non-filing the returns before the Lok Ayukta, there is a punishment for the officials. But, there is no punishment to the legislators except publishing the name in the newspapers.

ಡಾ: ಜಿ. ಪರಮೇಶ್ವರ್: ಇಂತಹ ಸೂಕ್ತ ಬದಲಾವಣೆಯನ್ನು ತರಬೇಕು ಎನ್ನುವುದಾದರೆ ಸದನ ಅದನ್ನು ತೀರ್ಮಾನ ಮಾಡಬೇಕಾಗುತ್ತದೆ. ಆ ದೃಷ್ಟಿಯಲ್ಲಿ ಮುಂದೆ ಬರತಕ್ಕಂಥ ದಿವಸದಲ್ಲಿ ಅದನ್ನು ಪರಿಶೀಲನೆ ಮಾಡುತ್ತೇವೆ.